ಸಾಧ್ಯವಾದರೆ ಇವತ್ತು ಸಾಯಂಕಾಲದೊಳಗೆ ಅಥವಾ ಮುಂದಿನ ದಿವಸ ಬೇಕಾದಂಥ ಮಾಹಿತಿಯನ್ನು ಒದಗಿಸುತ್ತೇನೆ.

ಅಧ್ಯಕ್ಷರು : ಶ್ರೀ ಆರಗ ಜ್ಞಾನೇಂದ್ರ ಅವರೇ, ಸಂಬಂಧಪಟ್ಟ ಮಂತ್ರಿಯವರು ವಿಧಾನ ಪರಿಷತ್ತಿನಲ್ಲಿ ಇದ್ದಾರೆ. ಆದ್ದರಿಂದ ತಮಗೆ ಉತ್ತರವನ್ನು ಸೋಮವಾರ ನಾನು ಕೊಡಿಸುತ್ತೇನೆ.

(ಇ) ಬೆಲೆ ಬಾಳುವಂಥ ಮಿಶ್ರತಳಿ ಹಸುಗಳು ಸಾಯುತ್ತಿರುವ ವಿಚಾರ

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ತಾವು ಯಾವಾಗಲಾದರೂ ಉತ್ತರವನ್ನು ಕೊಡಿಸಿ. ಆದರೆ ನನ್ನ ತಾಲ್ಲೂಕಿನಲ್ಲಿ ಜಾನುವಾರುಗಳು ಖಾಲಿ ಆಗುತ್ತಿವೆ. ಅಲ್ಲಿರುವ ಆಸ್ಪತ್ರೆಗಳಿಗೆಲ್ಲ ಬೀಗ ಹಾಕಿಸುವುದು ಒಳ್ಳೆಯದು. ಅಲ್ಲಿ ವಿಚಿತ್ರವಾದಂಥ ರೋಗ ಬಂದಿದೆ. ನಾವು ತಮಗೆ ಸೂಚನೆ ಕಳುಹಿಸಿಕೊಟ್ಟ ತಕ್ಷಣ ಸರ್ಕಾರ ಏನಾದರೂ ಕೆಲಸ ಮಾಡಿದ್ದರೆ ಅಡ್ಡಿ ಇಲ್ಲ. ನಾನು ತಮಗೆ ಸೂಚನೆ ಪತ್ರ ಕಳುಹಿಸಿ 4 ದಿವಸಗಳು ಆಯಿತು. ಇವತ್ತಿನವರೆಗೆ ನನ್ನ ಕ್ಷೇತ್ರಕ್ಕೆ ಸೈಂಟಿಸ್ಟ್ ಹೋಗಲಿಲ್ಲ. ಇದು ವಿಚಿತ್ರವಾದಂಥ ರೋಗ. ಶೂನ್ಯ ವೇಳೆ ಇರುವುದು ಇಲ್ಲಿ ಇಂಥ ಸಾರ್ವಜನಿಕ ಮಹತ್ವದ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕಲ್ಲವೇ?

ಅಧ್ಯಕ್ಷರು : ಪ್ರಶ್ನೆ ಆದಲ್ಲ. ಸಂಬಂಧಪಟ್ಟ ಸಚಿವರು ಯಾವುದೋ ಒಂದು ವಿಷಯಕ್ಕೆ ಜರೂರಾಗಿ ಉತ್ತರವನ್ನು ಕೊಡಬೇಕೆಂದು ವಿಧಾನ ಪರಿಷತ್ತಿನಲ್ಲಿ ಇರುವಾಗ ನಾನೇನು ಮಾಡಲಿ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹಾಗಲ್ಲ. ಮಾನ್ಯ ಸದಸ್ಯರು ನೋಟೀಸ್ ಕೊಟ್ಟು 4 ದಿವಸಗಳಾಯಿತು. ಸಂಬಂಧಪಟ್ಟ ಸಚಿವರು ವಿಧಾನಪರಿಷತ್ತಿನಲ್ಲಿ ಉತ್ತರ ಕೊಡುವುದನ್ನು ಮುಗಿಸಿಕೊಂಡು ಬಂದು ಇಲ್ಲಿ ಉತ್ತರ ಕೊಡಲಿ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಪಕ್ಕದ ಶಿವಮೊಗ್ಗದಲ್ಲಿ ಇದ್ದು ನನಗೆ ಸಹ ಇದು ಗೊತ್ತಾಗಲಿಲ್ಲ. ನಾನು ಇವತ್ತೇ ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅದಕ್ಕೆ ಏನು ಪರಿಹಾರ ಕಂಡು ಹಿಡಿಯಬೇಕೋ ಅದೆಲ್ಲ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಇದೊಂದು ವಿಚಿತ್ರವಾದ ರೋಗ. ಸುಮಾರು 10 ರಿಂದ 15 ಸಾವಿರ ರೂಪಾಯಿಗಳಷ್ಟು ಬೆಲೆ ಬಾಳುವಂಥ ಮಿಶ್ರತಳಿ ಹಸುಗಳು ಇವತ್ತಿನ ದಿವಸ ಸಾಯುತ್ತಿವೆ. ನಾಲ್ಕೈದು ದಿವಸಗಳ ಹಿಂದೆಯೇ ಈ ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಇವತ್ತೇ ಅಲ್ಲಿಗೆ ತಜ್ಞರು ಹೋಗತಕ್ಕಂಥ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಇಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ಒಂದೆರಡು ರೂಪಾಯಿಗಳಷ್ಟು ಔಷಧಿ ಇಲ್ಲ. ಈ ರೋಗದ ಚಿಕಿತ್ಸೆಗೋಸ್ಕರ ಒಂದು ಇಂಜೆಕ್ಷನ್‌ಗೆ ಸುಮಾರು 700 ರಿಂದ 800 ರೂಪಾಯಿಗಳವರೆಗೆ ಕೊಡಬೇಕಾಗಿದ್ದು, ರೈತರು ಇವತ್ತಿನದಿವಸ ಇದಕ್ಕಾಗಿ ಕಣ್ಣೀರು ಹಾಕುತ್ತಿದ್ದಾರೆ. ಇನ್ನು ಅಲ್ಲಿ ಅವರು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥಾದ್ದು ಬಾಕಿ ಇದೆಯಷ್ಟೆ. ಸಾಲ ತೆಗೆದುಕೊಂಡು ಮಿಶ್ರತಳಿ ಹಸುಗಳನ್ನು ತೆಗೆದುಕೊಂಡಿರತಕ್ಕಂಥ ರೈತರು ಇವತ್ತು ಅನಾಥರಾಗಿದ್ದಾರೆ. ಆದ್ದರಿಂದ ಸರ್ಕಾರ ಅಲ್ಲಿಗೆ ತುರ್ತಾಗಿ ತಜ್ಞರನ್ನು ಕಳುಹಿಸಿ ಚಿಕಿತ್ಸೆ ಕೊಡಿಸುವಂಥ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಇನ್‌ಚಾರ್ಜ್ ಮಿನಿಸ್ಟರ್‌ರವರು ಇವತ್ತೇ ತಜ್ಞರನ್ನು ಕಳುಹಿಸುತ್ತೇವೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈಗಾಗಲೇ ನಾನು ತಮ್ಮನ್ನು ಕೇಳಿಕೊಂಡಿದ್ದೇನೆ. ಇದು ಬಹಳ ಗಂಬೀರವಾದಂಥ ವಿಷಯವಾಗಿದ್ದು, ಇಡೀ ರಾಜ್ಯದಲ್ಲಿ ಪರಿಣಾಮ ಬೀರುವಂತಹ ವಿಷಯವಾಗಿದೆ. ನಮ್ಮ ಜಿಲ್ಲೆಯಲ್ಲೊಂದೇ ಅಲ್ಲದೇ ಎಲ್ಲಾ ಜಿಲ್ಲೆಯಲ್ಲಿಯೂ ಮತಾಂತರ ನಡೆಯುತ್ತಿದೆ.

ಅಧ್ಯಕ್ಷರು : ತಾವು ಮತಾಂತರದ ಬಗ್ಗೆ ಹೇಳುತ್ತಿದ್ದೀರಿ, ಇದು ಬಹಳ ಸೂಕ್ಷ್ಮವಾದ ಪ್ರಶ್ನೆಯಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹಮಂತ್ರಿಯವರು ಹಾಗೂ ಮಾನ್ಯ ಕಾನೂನು ಸಚಿವರ ಜೊತೆ ಮೊದಲು ನಾನು ಮಾತನಾಡುತ್ತೇನೆ. ಏಕೆಂದರೆ, ಒಂದು ಸಾರಿ ಚರ್ಚೆಗೆ ಬಂದ ಮೇಲೆ ಮತ್ತೆ ಗೊಂದಲವಾಗುವುದು ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಗೃಹ ಮಂತ್ರಿಗಳ ಜೊತೆ ಮಾತನಾಡಿ ಚರ್ಚೆ ಮಾಡುವುದಕ್ಕೆ ಒಂದು ದಿನಾಂಕವನ್ನು ನಿಗದಿ ಮಾಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಾನು ಮೊದಲು ಮಂತ್ರಿಗಳ ಜೊತೆ ಮಾತನಾಡಿದ ನಂತರ ದಿನಾಂಕವನ್ನು ನಿಗದಿ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ. ಪ್ರಭಾಕರ್ ಬಂಗೇರಿ : ಬೆಳ್ತಂಗಡಿಯಲ್ಲಿಯೂ ಕೂಡ ಮತಾಂತರ ನಡೆಯುತ್ತಿದೆ. ಆದ್ದರಿಂದ ನನ್ನ ಪ್ರಶ್ನೆಯನ್ನು ಒಟ್ಟಿಗೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು : ನಿಮ್ಮ ವಿಷಯವನ್ನು ಒಟ್ಟಿಗೆ ತೆಗೆದುಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಡೀ ರಾಜ್ಯದಲ್ಲಿ ಒತ್ತಡದಿಂದ ಮತಾಂತರ ನಡೆಯುತ್ತಿದೆ. ಇದು ತಮ್ಮ ಗಮನಕ್ಕೂ ಸಹ ಬಂದಿರಬಹುದು.

ಅಧ್ಯಕ್ಷರು : ಇದು ಬಹಳ ಸೂಕ್ಷ್ಮವಾದ ವಿಷಯವಾಗಿರುವುದರಿಂದ, ಇದರ ಬಗ್ಗೆ ಚರ್ಚೆ ಮಾಡಬೇಕೆ ಅಥವಾ ಬೇಡವೇ ಎಂಬುದನ್ನು ಮಾನ್ಯ ಗೃಹಮಂತ್ರಿಗಳ ಜೊತೆ ಮಾತನಾಡಿ ನಂತರ ತಿಳಿಸುತ್ತೇನೆ.